ಅಸಲು ದಾವೆ ಸಂಃ 292/2021
ಪಿ.ಡಬ್ಲ್ಯೂಃ1

ಈ ದಿನ ದಿನಾಂಕಃ 27-07-2024 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀಸವಾಲು ಪ್ರತಿವಾದಿ ಪರ ವಕೀಲರಿಂದಃ

ನಮ್ಮ ಕುಟುಂಬದ ಮೂಲ ಪುರುಷ ಪರಮಜ್ಜ ಎಂದರೆ ಸರಿ. ಪರಮಜ್ಜನ ತಂದೆಯ ಹೆಸರು ದೊಣ್ಣೆ ರಾಮಪ್ಪ . ದೊಣ್ಣೆ ರಾಮಪ್ಪ ನಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ವಾದ ಪತ್ರದಲ್ಲಿ ಪರಮಜ್ಜನ ತಂದೆ ದೊಣ್ಣೆ ರಾಮಪ್ಪ ಎಂದು ಬೆರೆಯಿಸಿರುವುದಿಲ್ಲ ಎಂದರೆ ಸರಿ. ದೊಣ್ಣೆ ರಾಮಪ್ಪ ನವರಿಗೆ ಪರಮಜ್ಜ ಒಬ್ಬನೇ ಮಗ. ಪರಮಜ್ಜನ ತಂದೆ ದೊಣ್ಣೆ ರಾಮಪ್ಪ ಸುಳ್ಳು ಎಂದರೆ ಸರಿಯಲ್ಲ. ಪರಮಜ್ಜ ನನ್ನು ನಾನು ನೋಡಿರುತ್ತೇನೆ. ಪರಮಜ್ಜ ನವರು ತೀರಿಕೊಳ್ಳುವ ಕಾಲಕ್ಕೆ ನನಗೆ ಸುಮಾರು 12 ರಿಂದ 13 ವರ್ಷ ವಯಸ್ಸಾಗಿತ್ತು. ಪರಮಜ್ಜ ತನ್ನ ಜೀವಿತಾವಧಿಯಲ್ಲಿ ಕೂಲಿ ಕೆಲಸ ನಿರ್ವಹಿಸುತ್ತಿದ್ದರು. ಪರಮಜ್ಜ ನವರ ಹೆಂಡತಿಯ ಹೆಸರು ಹೊನ್ನೂರಮ್ಮ . ಪರಮಜ್ಜ ಹಾಗೂ ಹೊನ್ನೂರಮ್ಮನಿಗೆ ಮೂರು ಜನ ಮಕ್ಕಳು. ಒಂದನೇ ಮಲ್ಲಪ್ಪ , ಎರಡನೇ ನಾಗಮ್ಮ , ಮೂರನೇ ಯವರು ನನ್ನ ತಂದೆ ಸಿದ್ದಪ್ಪ. ನಾಗಮ್ಮ ಪರಮಜ್ಜನ ಮಗಳೆಂದು ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ ಎಂದರೆ ಸರಿ.

2. ನಾಗಮ್ಮ ದೇವದಾಸಿ ಎಂದರೆ ಸರಿ. ದೇವದಾಸಿ ಎಂದರೆ ಕರಿಯಮ್ಮ ದೇವರಿಗೆ ಹೆಣ್ಣು ಮಗಳನ್ನು ಮದುವೆ ಮಾಡಿಕೊಡುವುದು. ದೇವದಾಸಿಯರಿಗೆ ನಿರ್ದಿಷ್ಟ ಸ್ಥಳ ವಾಸಿಸಲು ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾಗಮ್ಮ ನಮ್ಮ ಮನೆಯಲ್ಲಿ ವಾಸ ಮಾಡುತ್ತಿದ್ದರು ಎಂದು ನುಡಿಯತ್ತಾರೆ. ಪರಮಜ್ಜನ ಜೀವಿತಾ ಕಾಲಕ್ಕೆ ಮಲ್ಲಪ್ಪ , ನಾಗಮ್ಮ ಮತ್ತು ಸಿದ್ದಪ್ಪ ಒಟ್ಟಾಗಿ ವಾಸ ಮಾಡಿರುವುದಕ್ಕೆ ಯಾವುದೇ ದಾಖಲೆಗಳು ಇರುವುದಿಲ್ಲ ಎಂದರೆ ಸರಿ. ನಾಗಮ್ಮ, ಪರಮಜ್ಜ ಹಾಗೂ ಹೊನ್ನೂರಮ್ಮನ ಮಗಳು ಅಲ್ಲ ಎಂದರೆ ಸರಿಯಲ್ಲ. ನಾಗಮ್ಮನಿಗೆ ಭೈರಮ್ಮ ಒಬ್ಬಳೇ ಮಗಳು ಎಂದರೆ ಸರಿ. ಭೈರಮ್ಮನ ಗಂಡ

ಕಂಚುಗಾರನ ಹಳ್ಳಿಯ ರಂಗಪ್ಪ ಎಂದರೆ ಸರಿ. ರಂಗಪ್ಪ ಹಾಗೂ ಭೈರಮ್ಮ ನಾಗಮ್ಮನ ಜೀವಿತಾವಧಿಯಲ್ಲಿ ಕಂಚುಗಾರನಹಳ್ಳಿಯಲ್ಲಿ ವಾಸ ಮಾಡುತ್ತಿದ್ದರು ಎಂದರೆ ಸರಿ. ರಂಗಪ್ಪ , ಭೈರಮ್ಮ ಮತ್ತು ಅವರ ತಾಯಿ ನಾಗಮ್ಮ ಕಂಚುಗಾರನಹಳ್ಳಿಯಲ್ಲಿ ಒಟ್ಟಾಗಿ ವಾಸ ಮಾಡುತ್ತಿದ್ದರು ಎಂದರೆ ಸರಿ.

3. ನಿಪಿ.3 ರಿಂದ 10 ರಲ್ಲಿರುವ ಮರಣ ಪ್ರಮಾಣ ಪತ್ರಗಳನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸದರಿ ದಾಖಲೆಗಳನ್ನು ನ್ಯಾಯಾಲಯದಿಂದ ನನ್ನ ಮಗ ತಂದಿರಬಹುದು. ಸದರಿ ದಾಖಲೆಗಳನ್ನು ಸುಮಾರು 20 ವರುಷದ ಹಿಂದೆ ಮಾಡಿಸಿರಬಹುದು. ನಾಗಮ್ಮ 1982 ನೇ ಸಾಲಿನಲ್ಲಿ ಮರಣ ಹೊಂದಿರುತ್ತಾರೆ, ನಿಪಿ.3 ರಿಂದ 10 ರಲ್ಲಿ ಇರುವ ಮರಣ ಪ್ರಮಾಣ ಪತ್ರಗಳನ್ನು ನನ್ನ ಮೊಮ್ಮಗ ಮಾಡಿಸಿರುತ್ತಾರೆ. ಮರಣ ಪ್ರಮಾಣ ಪತ್ರಗಳನ್ನು ಪಡೆಯಲು ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ.3 ರಿಂದ 10 ರ ದಾಖಲೆಗಳನ್ನು 1992 ರಲ್ಲಿ ಮಾಡಿಸಿರಬಹುದು ಎಂದು ನುಡಿಯುತ್ತಾರೆ.

ಪ್ರತಿವಾದಿ ವಕೀಲರು ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಪಾಟೀಸವಾಲಿಗೆ ಕಾಲಾವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.